ಸಂಜೆ ಇವರ ಆಫೀಸಿಗೆ ಬರುತ್ತಿದ್ದಳು. ಮೂವೀ ಡೇಟ್‌ನೈಟ್, ಮ್ಯೂಸಿಕ್ ಫೆಸ್ಟಿವಲ್ ಎನ್ನುತ್ತ ಇಬ್ಬರೂ ಖುಷಿಯಾಗಿದ್ದರು. ಹದಿನೈದೇ ಜನರಿದ್ದ ಇವರ ಆಫೀಸಿನಲ್ಲಿ ಯಾರೂ ಏನನ್ನೂ ಗುಟ್ಟು ಮಾಡಿದ್ದಿಲ್ಲ.

ಏವಾ ನೀಲ್‌ಗಿಂತ ಮೂರು ವರ್ಷ ದೊಡ್ಡವಳು. ಮದುವೆಯಾಗಿ ವರ್ಷವಾಗುವುದರೊಳಗೆ ಮಗ ಲಿಯೊ ಹುಟ್ಟಿದ್ದ. ಲಿಯೊ ಎರಡು ವರ್ಷದ ಮಗುವಾಗಿದ್ದಾಗ ಒಂದು ಹಿಮ ಮುಸುಕಿದ ಸಂಜೆ, ಮಗನನ್ನು ಮನೆಗೆ ಕರೆತರಲು ಚೈಲ್ಡ್ ಕೇರ್ ಸೆಂಟರಿಗೆ ಏವಾ ಹೊರಟಿದ್ದಳು. ರಸ್ತೆಯ ಮೇಲೆ ಬ್ಲ್ಯಾಕ್ ಐಸಿನ ತೆಳುಪರದೆ ಹರಡಿದ್ದೇ ನೆವ. ಏವಾಳ ಕಾರು ಗಿರಕಿ ಹೊಡೆಯುತ್ತ ಎದುರಿನ ಲೇನ್‌ನಲ್ಲಿ ಬರುತ್ತಿದ್ದ ಲಾರಿಗೆ ಹೋಗಿ ಕುಟ್ಟಿತ್ತು. ತಕ್ಷಣವೇ ಆಸ್ಪತ್ರೆ ಔಷಧ ಎಲ್ಲವೂ ನಡೆದರೂ ಮೆದುಳಿನಲ್ಲಿ ತೀವ್ರ ರಕ್ತಸ್ರಾವವಾಗಿ ಮೂರು ದಿನಗಳ ನಂತರ ಆಸ್ಪತ್ರೆಯ ಬೆಡ್ಡಿನಲ್ಲಿ ತೀರಿಕೊಂಡಿದ್ದಳು. ಕೊನೆಯ ಕಾರ್ಯಗಳನ್ನೆಲ್ಲ ಮುಗಿಸಿ ಎರಡು ವಾರದ ನಂತರ ಆಫೀಸಿಗೆ ಬಂದ ನೀಲ್, ವಿಷಾದದ ಬೆಟ್ಟವಾಗಿದ್ದ. ಪುಟಾಣಿ ಲಿಯೊನ ದೇಖರೇಖೆಯ ನಡುವೆ ಏವಾಳ ಸಾವು ತಂದಿಟ್ಟ ನಿರ್ವಾತ, ಶೋಕವನ್ನು ಕರುಳಿನಿಂದ ಹೊರದೂಡಲು ಬಹಳ ಕಷ್ಟವಾಗುತ್ತಿರುವುದು ಆಫೀಸಿನವರಿಗೆಲ್ಲ ಗೊತ್ತಾಗುತ್ತಿತ್ತು.

ಇಂಥದ್ದೇ ಒಂದು ದಿನ ಜ್ಯೋತ್ಸ್ನಾ ಮತ್ತು ನೀಲ್ ಹತ್ತಿರಾದದ್ದು. ಯಾವುದನ್ನೂ ಬಾಯೊಡೆದು ಹೇಳಬೇಕಾಗಿರಲಿಲ್ಲ. ಅವರ ಅರಿವಿಗೆ ಬಾರದೆ ಅವರು ಸೃಷ್ಟಿಸಿಕೊಂಡ ಸನಿಹ, ಆಪ್ತ ಸಂಭಾಷಣೆಗಳು, ಕಾಳಜಿ, ಗಮನಿಸುವಿಕೆ ಇವೆಲ್ಲವೂ ಇಬ್ಬರನ್ನು ಕೆಲಕಾಲ ಅವ್ಯಕ್ತಕ್ಕೆ ನೂಕಿದವು. ಬಲುಬೇಗ ಈ ವಹಿವಾಟು ವ್ಯಕ್ತವಾಗಿ ಕೂಡ ಬದಲಾಯಿತು. ನೋ ಸ್ಟ್ರಿಂಗ್ಸ್ ಅಟ್ಯಾಚ್ಡ್ ಎಂಬಂತೆ ಶುರುವಾದ ಅವರ ದೈಹಿಕ ಸೆಳೆತ ಪ್ರೀತಿಯಾಗಿ ಹರಿಯಲೂ ಸಮಯ ಹಿಡಿಯಲಿಲ್ಲ. ಯಾತನೆಯ ಹೊರೆ ಇಬ್ಬರನ್ನೂ ಸಾಕಷ್ಟು ಹೈರಾಣು ಮಾಡಿತ್ತಲ್ಲ, ಅದೇ ಕಾರಣವೆಂದುಕೊಂಡರು ಅವರು.

ಬರಿಯ ದೈಹಿಕ ಆಕರ್ಷಣೆಯಿಂದ ಇಬ್ಬರೂ ಹತ್ತಿರಾದಾಗ ಯಾವ ಬಗೆಯ ಹಿಂಜರಿಕೆಯೂ ಜ್ಯೋತ್ಸ್ನಾಳನ್ನು ಕಾಡಲಿಲ್ಲ. ಪ್ರೀತಿ, ಮಾಧುರ್ಯದ ಘಮ ಹರಡತೊಡಗಿತಲ್ಲ, ಆಗ ಅವಳ ಇನ್ಫೀರಿಯಾರಿಟಿ



ಪುಟಿದೇಳುತ್ತಿತ್ತು. ನೀಲ್ ಅತಿಸಹಜವಾಗಿ ಕೇಳಿದ 'ಕುಡಿಯಲೇನು ಕೊಡಲಿ?' ಎಂಬ ಪ್ರಶ್ನೆ, ಅವಳ ಕೈಯಲ್ಲಿ ಅವನು ವೈನ್ ಗ್ಲಾಸ್ ಹಿಡಿಸಿದಾಗ ಆಗುವ ಮುಜುಗರ, ಅವನ ಮನೆಯಲ್ಲಿಯೇ ಉಳಿದ ಮರುದಿನ ಅಳುಕಿಲ್ಲದೆ ತನ್ನ ಒಳವಸ್ತ್ರಗಳನ್ನೂ ವಾಶಿಂಗ್‌ಮಶೀನಿಗೆ ಹಾಕುವ ಅವನ ದಿನಚರಿ, ಅವಕಾಶ ಸಿಕ್ಕಿದಾಗಲೆಲ್ಲ ಆಸ್ಥೆಯಿಂದ ತುಟಿಯ ಮೇಲೆ ಒತ್ತುತ್ತಿದ್ದ ಮುತ್ತು, ಮೆಟ್ಟಿಲು ಇಳಿಯುವಾಗ ಹಿಂದಿನಿಂದ ಬಂದು ತಬ್ಬಿ ತನ್ನ ಒಳದೋಳನ್ನು ಮುದ್ದಿಸುವ ನಯ, ಕಿಚನ್ನಿನ ಕಟ್ಟೆಯ ಮೇಲೆ ತನ್ನನ್ನು